

ಕಬ್ಬನ್ ಉದ್ಯಾನದ ಚೆಲುವು

ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಆಕಾಶ ದಿಟ್ಟಿಸುತ್ತಾ ನಿಂತೆ. ಏನು ಬರೆಯೋದು? ಆಕಾಶ ಕೂಡ ಅಪಾರ್ಟ್ಮೆಂಟ್‌ಗಾಗಿ ದಾರಿ ಬಿಟ್ಟು ಕೊಟ್ಟಿರುವ ಊರು ನಮ್ಮ ಬೆಂಗಳೂರು ಅನ್ನಲೇ?

ಆಗ... ಎಲ್ಲಾ ಕಡೆ ಮೈಸೂರು ಹೆಂಚಿನ ಮನೆಗಳು! ವಠಾರದ ಮನೆಗಳು! RCC ಮನೆ, ಹೊಸ ಕಟ್ಟಡ, ಅಂದರೆ ಅದು ಗಣ್ಯರ ಮನೆ ಅಂತ ಅರ್ಥ. ಎಲ್ಲೆಲ್ಲಿಂದ ಈ ಬೆಂಗಳೂರಿಗೆ ಜೀವನ ಅರಸುತ್ತಾ ಬಂದರೋ ಈ ಜನರು... ಇಲ್ಲೇ ಬೀಡುಬಿಟ್ಟರು. ಒಮ್ಮೆ ಬೆಂಗಳೂರಿಗೆ ಬಂದವರು ಕನಸಿನಲ್ಲೂ ತಮ್ಮೂರಿಗೆ ಹೋಗಲಾರರು. ಅಷ್ಟು ಆಕರ್ಷಕ ಬೆಂಗಳೂರು!

ಇಲ್ಲಿ ನೆಲೆಸಿದರೂ ಪರಭಾಷಿಕರು ಕನ್ನಡ ಕಲಿಯುವುದಿಲ್ಲ.

ಆಗಿನಿಂದಲೇ ವಿವಿಧ ವ್ಯಾಪಾರಗಳಿಗೆ ಅಂತ ಇಲ್ಲಿ ತಳವೂರಿ ಕನ್ನಡ ಕಲಿತು ಮಾತನಾಡುವವರ ಮಾತಂತೂ ಒಂದು ವಿಶಿಷ್ಟ ಶೈಲಿಯೇ ಹೌದು. ಹಾ್ಞ! ಹೊಳೆಯಿತು.!

ಯಾವುದಾದ್ರೂ ಒಂದು ring route ಬಸ್ ಹತ್ತಿ ಒಂದು ಸುತ್ತು ಹೋಗಿ ಬಂದರೆ ಲೇಖನಕ್ಕೆ ಒಳ್ಳೇ ವಸ್ತು ವಿಶೇಷ ಸಿಗಬಹುದು ಅನಿಸಿತು. ಹೊರಟೇಬಿಟ್ಟೆ. ಎಲ್ಲರೂ ಮೊಬೈಲ್‌ಫೋನ್‌ನಲ್ಲಿ ಮುಳುಗಿ ಹೋಗಿದ್ದರು. ಕಿವಿಗಳಿಗೆ ಇಯರ್ ಫೋನ್ ಚುಚ್ಚಿಕೊಂಡು ಏನೋ ಕೇಳುತ್ತಾ ಇದ್ದರು. ತಮ್ಮಷ್ಟಕ್ಕೆ ತಾವೇ ತಲೆದೂಗುತ್ತಾ, ನಗುತ್ತಾ, ಜಗತ್ತಿನ ಪರಿವೇ ಇಲ್ಲ ಎಂಬಂತೆ. ಯಾರು ಯಾರಿಗೂ ಸಂಬಂಧವೇ ಇಲ್ಲ ಅಂದುಕೊಳ್ಳುತ್ತಿದ್ದೆ. ಒಬ್ಬರು ಕರಿ ಕೋಟನ್ನು ಧರಿಸಿ ಫೋನ್‌ನಲ್ಲಿ ಮಾತಾಡುತ್ತಿದ್ದರು. 'ಅಲ್ಲಾರೀ... ಸೋಮವಾರ ಬನ್ನಿ ಅಂತ ಆವತ್ತೇ ಹೇಳಿದ್ನಲ್ಲ...'

'No. No.. No... Proceeding timeನಲ್ಲಿ, Client ಇಲ್ಲ ಅಂದ್ರೆ argument weak ಆಗುತ್ತೆ' ಅಂತ ವಿವರಿಸ್ತಾ ಇದ್ದರು.

'Hai bro! How are you' ಎಂದು ಹಿಂದಿನ ಸೀಟಿನಿಂದ ಮುಂದಕ್ಕೆ ಬಂದ ತರುಣ, 'why dull dude'... ಎಂದು ಮತ್ತೊಬ್ಬನನ್ನು ಕೇಳಿದ. 'yo Shit... princi ಇಂದ ಮನೆಗೆ Letter ಹೋಗಿದೆ. Full Fighting! ಮನಸ್ಸು ಖರಾಬ್ ಆಗಿದೆ. Dont know What to do... ಅಂದ ಹಾಗೆ, ನಿನ್ನ Dove ಕಾಣಲಿಲ್ಲ...! ಅಂದ.

'ಅವಳು ಬರೀ ಓಳು ಮಚ್ಚಾ... ನಾನು ಎಷ್ಟೇ build up ಕೊಟ್ರೂ scope ತೊಗೋಳೋದು ಬಿಡಲ್ಲ...'

'chill ಮಾಡು ಮಗಾ'... ಹೀಗೇ ಅವರ ಮಾತು ನಡೀತಾ ಇತ್ತು. ಅಷ್ಟರಲ್ಲಿ ಕಂಡಕ್ಟರ್ ಜೋರಾಗಿ ಕೂಗುತ್ತಿದ್ದ. 'ಯಾಕ್ರೀ ಹೇಳಿದ್ರೆ ಅರ್ಥ ಆಗಲ್ಲವಾ? ಎಲ್ಲೆಲ್ಲಿಂದನೋ ಬಂದು ನಮ್ ತಲೆ ತಿಂತೀರಿ...'.

'I thought this bus goes to Koramangala, what he is telling? I Cant understand kannada' ಅಂತ ಒಬ್ಬಾಕೆ.

'ಯಾ ಬಸ್ ಕೋರಮಂಗಲ ನಹೀ ಜಾಯೇಗೀ' ಅವರಿಗೆ ಇನ್ನೊಬ್ಬರ ಉತ್ತರ.

ಸಿಟಿ ಮಾರ್ಕೆಟ್ ಬಂತು. ಹೂ ಮಾರುವವರು ಬುಟ್ಟಿ ಹೊತ್ತು ಹತ್ತಿದರು.

'ಇವತ್ತು ಏನೂ ಗಿಟ್ಟಂಗಿಲ್ಲ, ಒಸಿ ಕಡಿಮೆ ಮಾಡ್ಡಾ ಅಂದರೆ, ಆಗಾಕಿಲ್ಲ ಅಂತಾನೆ ಅವ್ನು...'

'ಅದ್ಕೇಯಾ... ನಾ ಮಲ್ಗೆ ಸಾವಾಸನೇ ಬ್ಯಾಡ ಅಂತ ಬುಟ್ ಬುಟ್ಟೆ' ಹೀಗೇ ಮಾತಾಡುತ್ತಿದ್ದರು. ಪರವಾಗಿಲ್ಲ, ಲೇಖನಕ್ಕೆ ಇವೆಲ್ಲ ಸೇರಿಸಬಹುದು ಅಂತ ನೋಟ್ಸ್ ಮಾಡಿಕೊಂಡೆ.

ನಾನು ಬೆಂಗಳೂರಲ್ಲಿ ಹುಟ್ಟಿ ಬೆಳೆದವಳು. ಒಂದು ಬೆಂಗಳೂರಿನ ಕುರಿತ ಲೇಖನ ಬರೆಯೋಕೆ ಇಷ್ಟು ಪರದಾಡುತ್ತಿದ್ದೇನಲ್ಲ ಅನಿಸಿತು. ಮಧ್ಯಾಹ್ನದ ಹೊತ್ತಾದ್ದರಿಂದ ಬಸ್ ಅಷ್ಟು rush ಇರಲಿಲ್ಲ. ಕೂಡಲೇ ಹಿರಿಯ ಮಿತ್ರ ಹಿತೈಷಿ ಕಲಾವಿದ ಎಂ.ಎಸ್. ಮೂರ್ತಿ ಅವರಿಗೆ ಕರೆ ಮಾಡಿದೆ. ಉಭಯ ಕುಶಲೋಪರಿ ಆಯಿತು. 'ಸರ್ ಬೆಂಗಳೂರು ಬಗ್ಗೆ ಬೆಂಗಳೂರು ಕನ್ನಡ ಶೈಲಿ ಬಗ್ಗೆ ಏನು ಬರೆಯಬಹುದು' ಎಂದು ಕೇಳಿದೆ.

ಅವರು ಬೆಂಗಳೂರಲ್ಲೇ ಬೆಳೆದವರು. ಬೆಂಗಳೂರಿನ ಸಾಂಸ್ಕೃತಿಕ ವೈಭವ ಕಂಡವರು. ಹೇಳಿದರು. 'ಅಲ್ರೀ ಸಂಸ್ಕೃತಿ ಅಂದ್ರೆ ಏನು? ಶಿಷ್ಟರು ಮಾತಾಡೋದು ಮಾತ್ರ ಕನ್ನಡನೆನ್ರಿ? ಬೆಂಗಳೂರಲ್ಲಿ ಎಂತೆಂಥವರು ಇದ್ರು... ಬೆಂಗಳೂರು ಬಿಜಾಪುರದ ಸುಲ್ತಾನರು ಮರಾಠರು ಮೈಸೂರು ಅರಸರು ಮೊಘಲರು ಬ್ರಿಟಿಷರು ಎಲ್ಲರೂ ಆಳಿದ ಪ್ರದೇಶ, ಇಲ್ಲಿ ರೈತರು ಕುರಿ ಮೇಕೆ ಸಾಕುವವರು ಇದ್ದಾರೆ, ವ್ಯಾಪಾರ ಅರಸಿ ಬಂದ ವರ್ತಕರಿದ್ದಾರೆ, ವಿದ್ಯಾಭ್ಯಾಸಕ್ಕೆ ಊರು ಬಿಟ್ಟು ಬಂದವರಿದ್ದಾರೆ, ದೊಡ್ಡ ಕಾರ್ಖಾನೆಗಳು ಕಂಪನಿಗಳಿಗೆ ಕೆಲಸ ಮಾಡಲು ಬಂದವರಿದ್ದಾರೆ. ವಿವಿಧ ವೃತ್ತಿಯ ಜನ ಒಂದೊಂದು ರೀತಿ ಮಾತಾಡ್ತಾರೆ. ತಲತಲಾಂತರದಿಂದ ಬೆಂಗಳೂರಿನಲ್ಲಿಯೇ ನೆಲೆಸಿ ಬೆಂಗಳೂರಿಗರೇ ಆದ್ರು ಇವರ ಕನ್ನಡ ವಿಶಿಷ್ಟ ಎಂದರು.

'ಶಿವಾಜಿನಗರದ ಕಡೆ ನಿಂದು ಯಜಮಾನ್ರು ಸುಭಾ ಬರ್ತಾರೆ' ಅಂದ್ರೆ, ರಸಲ್ ಮಾರ್ಕೆಟ್ ಬಳಿ, 'ಏಂಪಾ... ಎನ್ನ ಪಂಡ್ರುದೂ... ಒಣ್ಣಾರ ರೂಪಾ ಕುಡ್ತುಟ್ಟು ಪೋಯೇಂ...' ಅಂತಾರೆ,

'ನಿಮ್ದು ಒಡವೆ ನಮಗೆ ಬೇಡ ಬಡ್ಡಿ ಜಾದಾ ಆಗ್ತಿದೆ ಫಸ್ಟ್ ತಾರೀಕ್ ಎಷ್ಟು ಲೆಕ್ಕ ಮಾಡಿ ತೋಡ ತೋಡ' ಅಂತಾನೆ ಮಾರ್ವಾಡಿ.

'ಏಮಂಡೀ... ವಾರು ರೇಪು ವಸ್ತಾರಂಟ' ಅಂತ ನನ್ನ ಸ್ನೇಹಿತ ಹೇಳ್ತಾನೆ. 'ನಾಕೂ ತೆಲುಸ್ತುಂದಿ' ಅಂದೆ. ಇವೆಲ್ಲಾ ಬೆಂಗಳೂರು ಕನ್ನಡವೇ ಆಗಿಬಿಟ್ಟಿದೆ ಅಲ್ವೇನ್ರೀ ಅಂದರು. ಅವರು ಮುಂದುವರೆದು ಹೇಳಿದರು 'ಬೆಂಗಳೂರು ಸಾಂಸ್ಕೃತಿಕ ನಗರ. ಸಂಸ್ಕೃತಿ ಸಾಮಾನ್ಯ ಜ್ಞಾನವನ್ನು ಆಳಬಾರದು. ಭಾಷೆ ಮಾತ್ರ ಸಂಸ್ಕೃತಿ ಅಲ್ಲ, ಸಂಗೀತ, ಚಿತ್ರಕಲೆ ದೇವಸ್ಥಾನ ಕಲೆ ಉತ್ಸವ ಹಬ್ಬ ಹರಿದಿನಗಳು ನಮ್ಮ ಅಸ್ಮಿತೆ. ನೋಡಬೇಕು. ಬೆಂಗಳೂರನ್ನು ಪ್ರತಿನಿಧಿಸುವ, ಪ್ರೀತಿಸುವ ಮಂದಿ ಇದ್ದಾರೆ' ಅಂದ್ರು.

ಮಿಶ್ರ ಕನ್ನಡ... ಸಮ್ಮಿಶ್ರ ಜೀವನ. ಹತ್ತಾರು ವೇಷ, ಭಾಷೆ, ಆಧುನಿಕ ಮತ್ತು ಪುರಾತನ,

ಕಳೆದ ವಾರದ 'ಚೆನ್ನುಡಿ'
'ಅದು 'ಬೆಣ್ಣೆ ದೋಸೆ' ಅಲ್ಲ 'ಬ್ಯಣ್ಣಿ ದ್ವಾಸಿ'ಯ ಊರು'
ಕೇಳಿ ಪ್ರೀತಿ ನಾಗರಾಜ ಅವರ ಧ್ವನಿಯಲ್ಲಿ

ಪಾಡ್‌ಕಾಸ್ಟ್ ಕೇಳಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.





ಬೆಂಗಳೂರಿನ ಹೆಗ್ಗುರುತು ಲಾಲ್‌ಬಾಗ್